# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

## ಕಚೇರಿ ಆದೇಶ

**ವಿಷಯ :** 2021–22ನೇ ಸಾಲಿನ ಜುಲೈ ಮತ್ತು ಜನವರಿ ಹಾಗೂ 2022–23 ನೇ ಸಾಲಿನ ಜುಲೈ ಆವೃತ್ತಿಯ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿಗಳು ಆಂತರಿಕ ನಿಬಂಧನೆಗಳನ್ನು (ಬರವಣಿಗೆ ಮೂಲಕ) One Time Permission ಶುಲ್ಕ ಪಾವತಿಸಿ ಸಲ್ಲಿಸುವ ಬಗ್ಗೆ.

**ಉಲ್ಲೇಖ :** 1. ಮುಖ್ಯಸ್ಥರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪತ್ರ ಸಂಖ್ಯೆ:ಕರಾಮುವಿ/ಕ.ಅಮ.ಸಂ.ವಿ/ಕಾನಿ–02/2024–25, ದಿನಾಂಕ:25–11–2024

2. 66ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯು ನಡೆದ ದಿನಾಂಕ:09–06–2025
3. ಆದೇಶ ಸಂಖ್ಯೆ: ಕರಾಮುವಿ/ಡೀನ್(ಶೈ)–06/564/2025–26, ದಿನಾಂಕ : 19–08–2025
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 09–10–2025

****

**ಪ್ರಸ್ತಾವನೆ :**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಾರ್ಷಿಕ ಮತ್ತು ಸಿಬಿಸಿಎಸ್ ಸೆಮಿಸ್ಟರ್ ಪದ್ಧತಿಯ 2021–22ನೇ ಸಾಲಿನ ಜುಲೈ ಮತ್ತು ಜನವರಿ ಹಾಗೂ 2022–23 ನೇ ಸಾಲಿನ ಜುಲೈ ಆವೃತ್ತಿಯಲ್ಲಿ ವಿವಿಧ ಶಿಕ್ಷಣಕ್ರಮಗಳಿಗೆ ಪ್ರವೇಶಾತಿ ಪಡೆದು ಕಾರಣಾಂತರಗಳಿಂದ ಮತ್ತು ತಾಂತ್ರಿಕ ದೋಷದಿಂದ ಆಂತರಿಕ ನಿಬಂಧನೆಗಳನ್ನು ಸಲ್ಲಿಸದೇ ಇರುವ ವಿದ್ಯಾರ್ಥಿಗಳು ಆಂತರಿಕ ನಿಬಂಧನೆಗಳನ್ನು ಮತ್ತೊಮ್ಮೆ ಸಲ್ಲಿಸಲು ಕಾಲಾವಕಾಶ ಕೋರಿರುವ ಬಗ್ಗೆ ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥರು (ಉಲ್ಲೇಖ 01) ಮನವಿ ಪತ್ರವನ್ನು ನೀಡಿರುತ್ತಾರೆ. ಈ ಸಂಬಂಧ ಆಂತರಿಕ ನಿಬಂಧನೆಗಳನ್ನು ಸಲ್ಲಿಸದ ವಿದ್ಯಾರ್ಥಿಗಳು ದಂಡ ಶುಲ್ಕದೊಂದಿಗೆ ಬರವಣಿಗೆಯಲ್ಲಿ ಆಯಾಯ ವಿಭಾಗಕ್ಕೆ ಸಲ್ಲಿಸಲು ಹಾಗೂ ದಂಡ ಶುಲ್ಕ ನಿಗದಿಪಡಿಸಲು ದಿನಾಂಕ:09–06–2025 ರಂದು ನಡೆದ 66ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯಲ್ಲಿ ಸದರಿ ವಿಷಯ ಕುರಿತು ಸಮಿತಿ ರಚಿಸಲು ತೀರ್ಮಾನಿಸಲಾಗಿತ್ತು. **(ಶೈಕ್ಷಣಿಕ ಮಂಡಳಿ ಸಭೆ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯನ್ನು ಕಾಯ್ದಿರಿಸಿ)** ಉಲ್ಲೇಖ 03 ರ ಆದೇಶದಲ್ಲಿ ರಚಿತವಾಗಿರುವ ಸಮಿತಿಯಂತೆ ದಿನಾಂಕ:04–09–2025 ರಂದು ಸಭೆಯನ್ನು ನಡೆಸಲಾಗಿದ್ದು, ಸದರಿ ಸಭೆಯಲ್ಲಿ ಕಾರಣಾಂತರಗಳಿಂದ ಮತ್ತು ತಾಂತ್ರಿಕ ದೋಷದಿಂದ ಸಲ್ಲಿಸದೇ ಇರುವ ವಿದ್ಯಾರ್ಥಿಗಳು ಆಂತರಿಕ ನಿಬಂಧನೆಗಳನ್ನು ಬರವಣಿಗೆ ಮೂಲಕ ಹಾರ್ಡ್ ಕಾಪಿಗಳನ್ನು **ಸೆಮಿಸ್ಟರ್‌ಗೆ ರೂ 1,200/– ಗಳಂತೆ (ಒಂದು ಪತ್ರಿಕೆ ಅಥವಾ ಹೆಚ್ಚು ಪತ್ರಿಕೆ ಇದ್ದರೂ) ದಂಡ ಶುಲ್ಕವನ್ನು ಪರೀಕ್ಷಾ ನಿಧಿಗೆ ಪಾವತಿಸಿ ದಿನಾಂಕ:15–11–2025 ರೊಳಗೆ ಸಂಬಂಧಪಟ್ಟ ವಿಭಾಗಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು,** ಈ ಸಂಬಂಧ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಈ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಕರಾಮುವಿ/ಡೀನ್(ಶೈ)–06/811/ಕಂ.ಸಂ:85242/2025–26, ದಿನಾಂಕ :13–10–2025**

ಮೇಲ್ಕಂಡ ಪ್ರಸ್ತಾವನೆಗೊಳಪಟ್ಟಂತೆ, ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಾರ್ಷಿಕ ಮತ್ತು ಸಿಬಿಸಿಎಸ್ ಸೆಮಿಸ್ಟರ್ ಪದ್ಧತಿಯ 2021–22ನೇ ಸಾಲಿನ ಜುಲೈ ಮತ್ತು ಜನವರಿ ಹಾಗೂ 2022–23 ನೇ ಸಾಲಿನ ಜುಲೈ ಆವೃತ್ತಿಯಲ್ಲಿ ವಿವಿಧ ಶಿಕ್ಷಣಕ್ರಮಗಳಿಗೆ ಪ್ರವೇಶಾತಿ ಪಡೆದು ಕಾರಣಾಂತರಗಳಿಂದ ಮತ್ತು ತಾಂತ್ರಿಕ ದೋಷದಿಂದ ಆಂತರಿಕ ನಿಬಂಧನೆಗಳನ್ನು ಸಲ್ಲಿಸದೇ ಇರುವ ವಿದ್ಯಾರ್ಥಿಗಳಿಗೆ ಅವರ ಶೈಕ್ಷಣಿಕ ವಿಧ್ಯಾಬ್ಯಾಸವನ್ನು ಮುಂದುವರೆಸುವ ಸಂಬಂಧ ಆಂತರಿಕ ನಿಬಂಧನೆಗಳನ್ನು ಬರವಣಿಗೆ ಮೂಲಕ (One Time Permission) ಹಾರ್ಡ್ ಕಾಪಿಗಳನ್ನು **ಸೆಮಿಸ್ಟರ್‌ಗೆ ರೂ 1,200/– ಗಳಂತೆ (ಒಂದು ಪತ್ರಿಕೆ ಅಥವಾ ಹೆಚ್ಚು ಪತ್ರಿಕೆ ಇದ್ದರೂ) ದಂಡ ಶುಲ್ಕವನ್ನು ಪರೀಕ್ಷಾ ನಿಧಿಗೆ** ಪಾವತಿಸಿ ಸಂಬಂಧಪಟ್ಟ ವಿಭಾಗಕ್ಕೆ ಸಲ್ಲಿಸಲು ಆದೇಶಿಸಿದೆ.

ಆದೇಶದ ಮೇರೆಗೆ,

ಕುಲಸಚಿವ

ಗೆ,

1. ಕುಲಸಚಿವ (ಪರೀಕ್ಷಾಂಗ), ಕರಾಮುವಿ,
2. ಅಧ್ಯಕ್ಷರು, ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ,
3. ಸಂಯೋಜನಾಧಿಕಾರಿ, Digital Academic platform, , ಕರಾಮುವಿ,

ಪ್ರತಿ :

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್ (ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು. (ಸಂಬಂಧಪಟ್ಟ ಪ್ರಾದೇಶಿಕ ಕೇಂದ್ರ ಮತ್ತು ಅಧ್ಯಯನ ಕೇಂದ್ರಗಳಿಗೆ ಆಂತರಿಕ ನಿಬಂಧನೆಗಳ ಮಾಹಿತಿ ಒದಗಿಸುವುದು)
3. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
4. ಉಪಕುಲಸಚಿವರು (ಸಾಮಾನ್ಯ), ಕರಾಮುವಿ, ಮೈಸೂರು.
5. ಉಪಕುಲಸಚಿವ, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು.
6. ಸಂಯೋಜನಾಧಿಕಾರಿ, ವಿದ್ಯಾರ್ಥಿ ವೇತನ ಘಟಕ, ಕರಾಮುವಿ, ಮೈಸೂರು.
7. [illegible]